ಉಲ್ಲೇಖ:ಎನ್‌ಜಿಇಎಫ್(ಹು)/ಎಂಡಿ/ಹೆಚ್‌ಆರ್‌ಎಂ&ಎ/ಅಪ್ರೆಂಟಿಸ್/175/2024–25 ದಿನಾಂಕ: 11.11.2024

**ಪ್ರಕಟಣೆ**

**ವಿಷಯ : 2024–25 ನೇ ಸಾಲಿನಲ್ಲಿ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಅಪ್ರೆಂಟಿಸ್ ತರಬೇತಿಯನ್ನು ಪಡೆಯಲು ಐಟಿಐ ಹಾಗೂ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದ ಕುರಿತು.**

*******

ಎನ್‌ಜಿಇಎಫ್ ಹುಬ್ಬಳ್ಳಿ ಸಂಸ್ಥೆಯು ರಾಜ್ಯ ಸರ್ಕಾರದ ಉದ್ದಿಮೆಯಾಗಿದ್ದು ಸಂಸ್ಥೆಯಲ್ಲಿ ಮೆಕ್ಯಾನಿಸ್ಟ, ಟರ್ನರ್, ಫಿಟ್ಟರ್, ವೆಲ್ಡರ್, ಎಲೆಕ್ಟ್ರಿಷಿಯನ್, ಪಿಟ್ಲರ್ ಹಾಗೂ ಪೇಂಟಿಂಗ್ ಮತ್ತು ಟ್ರಾನ್ಸ್‌ಫಾರ್ಮರ ದುರಸ್ತಿ ಹಾಗೂ ತಯಾರಿಕೆಯಲ್ಲಿ ಹಾಗೂ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಅಲ್ಪಾವಧಿ ತರಬೇತಿಯನ್ನು ಸೂಕ್ತ ಶಿಷ್ಯ ವೇತನದೊಂದಿಗೆ ನೀಡಲಾಗುವುದು. ತರಬೇತಿಯ ನಂತರ ಅರ್ಹ ಅಭ್ಯರ್ಥಿಗಳನ್ನು ಸಂಸ್ಥೆಯ ದೈನಂದಿನ ಉತ್ಪಾದನೆಯಲ್ಲಿ ಹೊರಗುತ್ತಿಗೆಯ ಮೂಲಕ ಉದ್ಯೋಗವನ್ನು ಕಲ್ಪಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ತಮ್ಮ ಸೂಕ್ತ ದಾಖಲೆಗಳನ್ನು ದ್ವಿಪ್ರತಿಯಲ್ಲಿ ದಿನಾಂಕ 30.11.2024 ರ ಒಳಗಾಗಿ ಮೆ:ಎನ್‌ಜಿಇಎಫ್(ಹುಬ್ಬಳ್ಳಿ)ಲಿ. ಪಿ.ಬಿ.ರಸ್ತೆ, ರಾಯಾಪೂರ, ಧಾರವಾಡ-58009 ಇವರಿಗೆ ತಲುಪುವಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

- ಅಪ್ರೆಂಟಿಸ್ ತರಬೇತಿಯ ಅವಧಿ 3 ರಿಂದ 6 ತಿಂಗಳುಗಳು.
- ಅಪ್ರೆಂಟಿಸ್ ತರಬೇತಿಯ ಅವಧಿಯಲ್ಲಿ ಶಿಷ್ಯ ವೇತನ - ರೂ.5,500 ಪ್ರತಿ ತಿಂಗಳು
- ಅಪ್ರೆಂಟಿಸ್ ತರಬೇತಿಗೆ ಕಡ್ಡಾಯವಾಗಿ ಐಟಿಐ ಹಾಗೂ ಡಿಪ್ಲೋಮಾ ಪಾಸಾದ ಅಭ್ಯರ್ಥಿಗಳು ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಫಿಟ್ಟರ್, ವೆಲ್ಡಿಂಗ್, ಪೇಂಟಿಂಗ್ ಟರ್ನರ್, ಪಿಟ್ಲರ್ ಹಾಗೂ ಟ್ರಾನ್ಸ್‌ಫಾರ್ಮರ ವಿಭಾಗದ ಒಳಗೊಂಡ ವಿಷಯಗಳಲ್ಲಿ ಪಾಸಾಗಿರಬೇಕು.
- ಅಪ್ರೆಂಟಿಸ್ ತರಬೇತಿಗೆ ಕನಿಷ್ಠ 18 ವರ್ಷ ಗರಿಷ್ಠ 35 ವರ್ಷಗಳಿದ್ದು ಸರ್ಕಾರದ ಮಾರ್ಗಸೂಚಿಯಂತೆ ಮೀಸಲಾತಿಯನ್ನು ಅನುಸರಿಸಲಾಗುವುದು.
- ತರಬೇತಿಯ ಅವಧಿ ಕಡ್ಡಾಯವಾಗಿ ಮುಂಜಾನೆ 8 ರಿಂದ ಸಂಜೆ 4 ಗಂಟೆಯವರೆಗೆ ಇದ್ದು ತರಬೇತಿಯ ಅವಧಿಯಲ್ಲಿ ಯಾವುದೇ ರಜೆ ಮಂಜೂರಾತಿ ಇರುವುದಿಲ್ಲ. ಅಧಿಸೂಚನೆಯಂತೆ ರಜೆಗಳ ಅವಧಿಯಲ್ಲಿ ತರಬೇತಿ ಇರುವುದಿಲ್ಲ.
- ತರಬೇತಿಯ ಅವಧಿಯಲ್ಲಿ ಸಂಸ್ಥೆಯ ಕ್ಯಾಂಟೀನ್‌ನಲ್ಲಿ ರಿಯಾಯತಿ ದರದಲ್ಲಿ ಉಪಹಾರ ಹಾಗೂ ಊಟದ ಸೌಲಭ್ಯವನ್ನು ನೀಡಲಾಗುವುದು.
- ಸ್ವೀಕರಿಸಿದ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಜಿಲ್ಲಾ ಮಟ್ಟದಲ್ಲಿ ರಚಿಸಿದ ಸಮಿತಿಯ ಮೂಲಕ ಸಂಧರ್ಶನ ಜರುಗಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ವ್ಯವಸ್ಥೆಯೊಂದಿಗೆ ತರಬೇತಿಗೆ ಹಾಜರಾಗುವುದು.
- ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಂಸ್ಥೆಯ ವೆಬ್‌ಸೈಟ (ngefhubballi.com) ನಿಂದ ಪಡೆದು ಅಗತ್ಯ ದಾಖಲೆಗಳನ್ನು ಲಗತ್ತಿಸಿ ದಿನಾಂಕ 30.11.2024 ರ ಒಳಗಾಗಿ ತಲುಪುವಂತೆ ಅರ್ಜಿಯನ್ನು ಸಲ್ಲಿಸುವುದು.
- ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ದೂರವಾಣಿ (9483674902/7829959565) ಮೂಲಕ ಸಂಸ್ಥೆಗೆ ಕರ್ತವ್ಯದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

ಎನ್‌ಜಿಇಎಫ್ (ಹುಬ್ಬಳ್ಳಿ)ಲಿ.

2024–25 ನೇ ಸಾಲಿನಲ್ಲಿ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಅಪ್ರೆಂಟಿಸ್ ತರಬೇತಿಯನ್ನು ಪಡೆಯಲು ಐಟಿಐ ಹಾಗೂ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಂದ ಅಗತ್ಯ ಮಾಹಿತಿ ಸಲ್ಲಿಸಲು ಅರ್ಜಿ ನಮೂನೆ.

ಮಾನ್ಯರೇ,

ನಾನು ಶ್ರೀ/ಶ್ರೀಮತಿ/ಕುಮಾರ/ಕುಮಾರಿ.........................................................................ಸಾಕಿನ್.................................. ರಹವಾಸಿಯಾಗಿದ್ದು, ನಾನು....................................... ಸಾಲಿನಲ್ಲಿ ಐಟಿಐ/ಡಿಪ್ಲೋಮಾ ಕೋರ್ಸನ್ನು .......................................... ಸಂಸ್ಥೆಯಿಂದ ಪೂರ್ಣಗೊಳಿಸಿದ್ದು ಪ್ರಸ್ತುತ ಎನ್‌ಜಿಇಎಫ್ ಹುಬ್ಬಳ್ಳಿ ರಾಯಾಪೂರ, ಧಾರವಾಡ ಇವರಲ್ಲಿ... ...................................... ವಿಭಾಗಗಳಲ್ಲಿ ನನ್ನ ಸ್ವಿಚ್ಛೆಯಿಂದ ಅಪ್ರೆಂಟಿಸ್ ತರಬೇತಿಯನ್ನು ಪಡೆಯಲು ಇಚ್ಛಿಸಿದ್ದು ತರಬೇತಿಯ ಅವಧಿಯಲ್ಲಿ ನಾನು ಸ್ವಯಂಪೂರ್ವಕವಾಗಿ ಶ್ರದ್ಧೆಯಿಂದ ತರಬೇತಿಯನ್ನು ಪಡೆಯುತ್ತೇನೆ. ಸಂಸ್ಥೆಯಿಂದ ವಿಧಿಸಿದ ಷರತ್ತುಗಳಿಗೆ ನಾನು ಬದ್ಧನಾಗಿರುತ್ತೇನೆ. ಅಪ್ರೆಂಟಿಸ್ ತರಬೇತಿಯನ್ನು ಪಡೆಯಲು ನನ್ನ ದಾಖಲೆಗಳನ್ನು ಮತ್ತು ಅವಶ್ಯಕ ಮಾಹಿತಿಗಳನ್ನು ಈ ಕೆಳಗಿನಂತೆ ಪರಿಶೀಲನೆಗಾಗಿ ಸಲ್ಲಿಸಿರುತ್ತೇನೆ. ಒಂದು ವೇಳೆ ಸಲ್ಲಿಸಿರುವ ದಾಖಲೆಗಳು ದೋಷಪೂರಿತವಾದಲ್ಲಿ ಸರ್ಕಾರದ ಮತ್ತು ಸಂಸ್ಥೆಯ ನಿಯಮಗಳಂತೆ ತೆಗೆದುಕೊಳ್ಳುವ ಕ್ರಮಕ್ಕೆ ನಾನು ಬದ್ಧನಿರುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅರ್ಜಿದಾರರ ಸಹಿ

ಅರ್ಜಿದಾರರ ಹೆಸರು ಹಾಗೂ ಸಂಪೂರ್ಣ ವಿಳಾಸ :

ದೂರವಾಣಿ ಸಂಖ್ಯೆ ಮತ್ತು ಇಮೇಲ್ ವಿಳಾಸ :

ಅರ್ಜಿದಾರರ ಗುರುತಿನ ಚೀಟಿ (ಪ್ರತಿ ಲಗತ್ತಿಸುವುದು) :

ಅರ್ಜಿದಾರರ ಜನ್ಮ ದಿನಾಂಕ :

ಅರ್ಜಿದಾರರ ವಾರ್ಷಿಕ ಆದಾಯ :
(ತಹಶೀಲ್ದಾರ ಇವರಿಂದ ನೀಡಿದ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು)

ಅರ್ಜಿದಾರರ ಜಾತಿ :
(ತಹಶೀಲ್ದಾರ ಇವರಿಂದ ನೀಡಿದ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು)

ಅರ್ಜಿದಾರರ ಶೈಕ್ಷಣಿಕ ಅರ್ಹತೆ :
ಎಸ್.ಎಸ್.ಎಲ್.ಸಿ ಪಾಸಾದ ಪ್ರಮಾಣ ಪತ್ರ
ಐಟಿಐ/ಡಿಪ್ಲೋಮಾ ಪಾಸಾದ ಪ್ರಮಾಣ ಪತ್ರ
ಇತರೆ ಅನುಭವ ಪತ್ರ ಇದ್ದಲ್ಲಿ

ಎನ್‌ಜಿಇಎಫ್ ಹುಬ್ಬಳ್ಳಿ ಸಂಸ್ಥೆಯಲ್ಲಿ ಅಪ್ರೆಂಟಿಸ್ ತರಬೇತಿ ಪಡೆಯಲು ಈ ಮೇಲಿನಂತೆ ನನ್ನ ಎಲ್ಲ ದಾಖಲೆಗಳನ್ನು ಲಗತ್ತಿಸಿ ಅಗತ್ಯ ಮಾಹಿತಿಯನ್ನು ಪರಶೀಲನೆಗಾಗಿ ಸಲ್ಲಿಸಿರುತ್ತೇನೆ.

ಅರ್ಜಿದಾರರ ಸಹಿ